ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತಿನ ಬಜೆಟ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 02/03/2020

ಸರ್ಕಾರ ಹಣಿಯಲು ಪ್ರತಿಪಕ್ಷಗಳ ರಣತಂತ್ರ | ಇಂದಿನಿಂದ 2ನೇ ಹಂತದ ಬಜೆಟ್ ಅಧಿವೇಶನ

# ಸಂಸತ್‌ನಲ್ಲಿ ದೆಹಲಿ ಗಲಭೆ ಮಾರ್ದನಿಸುವ ಸಾಧ್ಯತೆ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನದ ಎರಡನೇ ಭಾಗ ಸೋಮವಾರ ಆರಂಭವಾಗಲಿದ್ದು ದೆಹಲಿ ಗಲಭೆ, ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಪ್ರತಿಭಟನೆ ಮತ್ತು ಆರ್ಥಿಕ ಹಿಂಜರಿತ ವಿಚಾರಗಳ ಮೇಲೆ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಪ್ರತಿಪಕ್ಷಗಳು ಸಜ್ಜಾಗಿವೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಪ್ರತಿಪಕ್ಷ ಪಾಳೆಯದ ನೇತೃತ್ವ ವಹಿಸಲಿದೆ. ಗಲಭೆ ನಿಯಂತ್ರಿಸಲು ಗೃಹ ಸಚಿವ ಅಮಿತ್ ಷಾ ವಿಫಲರಾಗಿದ್ದಾರೆಂದು ಅವರ ರಾಜೀನಾಮೆಗೆ ಪಟ್ಟು ಹಿಡಿಯುವ ರಣತಂತ್ರವನ್ನು ಪ್ರತಿಪಕ್ಷಗಳು ರಣತಂತ್ರ ಹೆಣೆದಿವೆ. ತೃಣಮೂಲ ಕಾಂಗ್ರೆಸ್, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಸಿಪಿಐ ಮೊದಲಾದ ಪಕ್ಷಗಳೂ ಸರ್ಕಾರದ ವಿರುದ್ಧ ಸಂಸತ್ತಿನಲ್ಲಿ ದನಿಯೆತ್ತಲು ನಿರ್ಧರಿಸಿವೆ.



ದೆಹಲಿ ಗಲಭೆಗಳ ವಿಚಾರದಲ್ಲಿ ತನ್ನ ಮೇಲೆ ಆಕ್ರಮಣ ಮಾಡಲು ಸಜ್ಜಾಗಿರುವ ಪ್ರತಿಪಕ್ಷಗಳನ್ನು ಆಳುವ ಪಕ್ಷ ಬಿಜೆಪಿ ಅದೇ ವಿಚಾರ ಮುಂದಿಟ್ಟು ಎದುರಿಸುವ ಸಂಭವವಿದೆ. ಗಲಭೆಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದು ಹೇಳಿ ಬಿಜೆಪಿ ಟೀಕಾಕಾರರ ಬಾಯಿ ಮುಚ್ಚಿಸಲು ಯತ್ನಿಸಬಹುದು.

2019-20ನೇ ಸಾಲಿನ ಮೂರನೇ ತ್ರೈಮಾಸಿಕದಲ್ಲಿ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಶೇಕಡಾ 4.7 ಬೆಳವಣಿಗೆ ದಾಖಲಿಸಿದೆ. ಆದರೆ, ಆರ್ಥಿಕತೆ ಮಂದಗತಿ ನಿವಾರಣೆ ಆಗಿಲ್ಲ. ಈ ವಿಚಾರವನ್ನು ಪ್ರತಿಪಕ್ಷಗಳು ಪ್ರಮುಖವಾಗಿ ಚರ್ಚಿಸಿವ ಕಾರ್ಯತಂತ್ರ ಹೊಂದಿವೆ.

ರಕ್ಷಣೆ, ಸಾರ್ವಜನಿಕ ಆಡಳಿತ ಮತ್ತು ಇತರ ಸೇವೆಗಳನ್ನು ಹೊರತುಪಡಿಸಿದರೆ ಮೂರನೇ ತ್ರೈಮಾಸಿಕದ ನಿಜವಾದ ಜಿಡಿಪಿ ಬೆಳವಣಿಗೆ ಶೇಕಡಾ 3.7 ಎಂದು ಕಾಂಗ್ರೆಸ್ ನಾಯಕ ಆನಂದ್ ಶರ್ಮಾ ವಿಶ್ಲೇಷಿಸಿದ್ದಾರೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸ್ವರೂಪವನ್ನು ಬದಲಾಯಿಸಿ 'ಅವಶ್ಯಕತೆ ಆಧರಿತ' ಯೋಜನೆಯಾಗಿ ಮಾಡಬೇಕು. ಈ ಯೋಜನೆಯಡಿ ವರ್ಷದಲ್ಲಿ 150 ದಿನ ಕೆಲಸ ಒದಗಿಸಬೇಕು. ಗ್ರಾಮೀಣ ಜನತೆಯ ಆದಾಯ ಹೆಚ್ಚಿಸಲು ಹಾಗೂ ಅದಕ್ಕೆ ತಕ್ಕಂತೆ ಬೇಡಿಕೆ ಹೆಚ್ಚಿಸಲು ಇದು ಅತ್ಯಗತ್ಯ ಎಂದೂ ಕಾಂಗ್ರೆಸ್, ಸಿಪಿಎಂ ಪಕ್ಷಗಳು ಸತತವಾಗಿ ಒತ್ತಾಯಿಸುತ್ತ ಬಂದಿವೆ. ಈ ವಿಚಾರವೂ ಅಧಿವೇಶನದಲ್ಲಿ ಪ್ರತಿಧ್ವನಿಸುವುದು ನಿಶ್ಚಿತವಾಗಿದೆ. ಸೋಮವಾರ ಮುಂದುವರಿಯಲಿರುವ ಬಜೆಟ್ ಅಧಿವೇಶನ ಏ. 3ರವರೆಗೆ ನಡೆಯಲಿದೆ.

ದೆಹಲಿ ಗಲಭೆಗಳ ವಿಚಾರದಲ್ಲಿ ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಪಕ್ಷಗಳ ದನಿಯನ್ನು ಎಡಪಕ್ಷಗಳು ಗಟ್ಟಿಗೊಳಿಸಲಿವೆ. ನಿಯಮ 267ರಡಿ ಈ ವಿಷಯ ಚರ್ಚೆಗೆ ನಾನು ರಾಜ್ಯಸಭೆ ಸಭಾಧ್ಯಕ್ಷರಿಗೆ ನೋಟಿಸ್ ನೀಡಿದ್ದೇನೆ.

| ಕೆ.ಕೆ. ರಾಗೇಶ್
ಸಿಪಿಎಂ ರಾಜ್ಯಸಭೆ ಸದಸ್ಯ

ದೇಶದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎಗ್ಗಿಲ್ಲದೆ ನಾಶಪಡಿಸುತ್ತಿರುವುದನ್ನು ಸಾಧ್ಯವಾದಷ್ಟೂ ಬಲ ಒಗ್ಗೂಡಿಸಿ ಸಂಸತ್ತಿನಲ್ಲಿ ಪ್ರಸ್ತಾಪಿಸುತ್ತೇವೆ. ಸರ್ಕಾರದ ಸಕ್ರಿಯ ಭಾಗವಹಿಸುವಿಕೆಯಿಂದಲೇ ಈ ರೀತಿ ಆಗುತ್ತಿದೆ. ಕೆಲವೊಂದು ಪ್ರಕರಣಗಳಲ್ಲಿ ಸರ್ಕಾರ ಕಣ್ಣಿದ್ದೂ ಕುರುಡನಂತೆ ವರ್ತಿಸುತ್ತಿದೆ.

| ಅಭಿಷೇಕ್ ಮನು ಸಿಂಘ್ವಿ
ಕಾಂಗ್ರೆಸ್ ವಕ್ತಾರ